# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 666 (782) |
| 02 | ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭಾ ಕ್ಷೇತ್ರ) |
| 03 | ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| 04 | ಉತ್ತರಿಸಬೇಕಾದ ದಿನಾಂಕ | : | 10-03-2026 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ತೋಟಗಾರಿಕೆ ಇಲಾಖೆಯಿಂದ ಬೆಂಗಳೂರು ನಗರದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಪಾರ್ಕುಗಳ ಸಂಖ್ಯೆ ಎಷ್ಟು; ಈ ಪಾರ್ಕುಗಳನ್ನು ಯಾವ ಯಾವ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ (ವಿವರ ನೀಡುವುದು) | ತೋಟಗಾರಿಕೆ ಇಲಾಖೆಯಿಂದ ಬೆಂಗಳೂರು ನಗರದಲ್ಲಿ ಹೊಸದಾಗಿ ಒಂದು ಪಾರ್ಕ್ ಎಂದರೆ ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟವನ್ನು (ಮಿನಿ ಲಾಲ್ ಬಾಗ್) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನ್ನಮಂಗಲದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. |
| (ಆ) | ಈ ಪಾರ್ಕುಗಳನ್ನು ನಿರ್ಮಿಸಲು ಸರ್ಕಾರ ಖರ್ಚು ಮಾಡುತ್ತಿರುವ ಮೊತ್ತವೆಷ್ಟು (ಮಾಹಿತಿ ನೀಡುವುದು) | ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟವನ್ನು ಅಭಿವೃದ್ಧಿ ಪಡಿಸಲು 2021-22 ನೇ ಸಾಲಿನಿಂದ 2025-26 ರವರೆಗಿನ ಅವಧಿಯಲ್ಲಿ ಒಟ್ಟಾರೆ ರೂ. 257 ಲಕ್ಷಗಳ ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ. |
| (ಇ) | ಇಲ್ಲಿಯತನಕ ಈ ಕುರಿತು ಆಗಿರುವ ಬೆಳವಣಿಗೆಗಳ ವಿವರವನ್ನು ನೀಡುವುದು. | 2021-22 ರಿಂದ 2025-26 ರವರೆಗೆ ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟದ ಸುತ್ತಳತೆಯಲ್ಲಿ 2800 ಮೀ ಉದ್ದದ ಪಾತ್ ವೇ ನಿರ್ಮಾಣ, 01 ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ, 03 ಶೌಚಾಲಯಗಳ ನಿರ್ಮಾಣ, 10 ಬೆಂಚುಗಳು ಹಾಗೂ 10 ಸೋಲಾರ್ ಲೈಟ್ಸ್‌ಗಳನ್ನು ಅಳವಡಿಸಲಾಗಿರುತ್ತದೆ ಹಾಗೂ 1200 ಚದರ ಅಡಿ ಪ್ರದೇಶದಲ್ಲಿ ಭೂದೃಶ್ಯವನ್ನು (Landscape). ಅಭಿವೃದ್ಧಿಪಡಿಸಿ ಸುಂದರೀಕರಿಸಲಾಗಿದೆ. |
| (ಈ) | ಬೆಂಗಳೂರಿನ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕುಗಳ ನಿರ್ವಹಣೆಗಾಗಿ 2025-26 ನೇ ಸಾಲಿನಲ್ಲಿ ಖರ್ಚು ಮಾಡಿರುವ ಅನುದಾನವೆಷ್ಟು; (ಮಾಹಿತಿ ಒದಗಿಸುವುದು). | ಬೆಂಗಳೂರಿನ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕುಗಳ ನಿರ್ವಹಣೆಗಾಗಿ 2025-26 ನೇ ಸಾಲಿನಲ್ಲಿ ಖರ್ಚು ಮಾಡಿರುವ ಅನುದಾನ ಒಟ್ಟು ರೂ. 942.19ಲಕ್ಷಗಳು. ವಿವರ ಕೆಳಕಾಣಿಸಿದಂತಿದೆ:-<br><br>1) ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟಕ್ಕೆ ರೂ. 740.19 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.<br>2) ಕಬ್ಬನ್ ಉದ್ಯಾನವನಕ್ಕೆ ರೂ. 202.00 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ. |

| | | |
|---|---|---|
| (ಉ) | ಖರ್ಚು ಮಾಡಿರುವ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಸಾರ್ವಜನಿಕರಿಗೆ ಒದಗಿಸಿರುವ ಮೂಲ ಸೌಕರ್ಯಗಳೇನು? (ವಿವರ ನೀಡುವುದು). | ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿ ಈ ಕೆಳಕಾಣಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |

| ಕ್ರ. ಸಂ. | ವಿವರಗಳು |
|---|---|
| 1 | ಲಾಲ್‌ಬಾಗ್‌ನಲ್ಲಿ ಹಾನಿಗೊಳಗಾದ ಸಿಮೆಂಟ್ ಬೆಂಚುಗಳು, ಕಲ್ಲಿನ ಬೆಂಚುಗಳು, ಕಲ್ಲಿನ ಅಲಂಕಾರಿಕ ಕಂಬಗಳಿಗೆ ದುರಸ್ತಿ ಕೆಲಸ ಹಾಗೂ ಸಿಮೆಂಟ್ ಬೆಂಚುಗಳಿಗೆ ಎನಾಮಲ್ ಬಣ್ಣ ಹಚ್ಚುವ ಕೆಲಸ. |
| 2 | ಲಾಲ್‌ಬಾಗ್ ಸಸ್ಯತೋಟದಲ್ಲಿ HDPE Pipeline ಹಾಗೂ ಇನ್ನಿತರೆ ಪೈಪ್‌ಲೈನ್ ಅಳವಡಿಸಲಾಗಿದೆ. |
| 3 | ಲಾಲ್‌ಬಾಗ್ ಸಸ್ಯತೋಟಕ್ಕೆ ಹೊಸದಾಗಿ 8500 Pop-Up, 5000 series ಸ್ಪ್ರಿಂಕ್ಲರ್‌ಗಳ ಸರಬರಾಜು ಮತ್ತು ಅಳವಡಿಸಲಾಗಿದೆ. |
| 4 | ಲಾಲ್‌ಬಾಗ್ ಸಸ್ಯತೋಟದ ಧನ್ವಂತರಿ ವಿಭಾಗದಲ್ಲಿ HDPE ಫೈಪ್‌ಲೈನ್ ಅಳವಡಿಕೆ ಹಾಗೂ ಗ್ಲಾಸ್ ಹೌಸ್, ಜಿಂಕೆ ನರ್ಸರಿ ಹಾಗೂ ರಾಜಾ ವೃತ್ತದ ಬಳಿ HDPE ಫೈಪ್‌ಲೈನ್ ಅಳವಡಿಸಲಾಗಿದೆ. |
| 5 | ಲಾಲ್‌ಬಾಗ್ ಸಸ್ಯತೋಟದಲ್ಲಿ 60 ಲೀಟರ್ ಮತ್ತು 110 ಲೀಟರ್ ಸಾಮರ್ಥ್ಯದ ಡಸ್ಟ್ ಬಿನ್ಸ್‌ಗಳ ಬದಲಾವಣೆ ಮತ್ತು ಡಸ್ಟಬಿನ್ ಸ್ಟ್ಯಾಂಡ್‌ಗಳ ರಿಪೇರಿ ಮತ್ತು ಹೊಸದಾಗಿ ಅಳವಡಿಸಲಾಗಿದೆ. |
| 6 | ಲಾಲ್‌ಬಾಗ್ ಸಸ್ಯತೋಟದ ಮುಖ್ಯ ಪ್ಯಾನಲ್ ಬೋರ್ಡ್‌ನಿಂದ ಗಾಜಿನ ಮನೆ ಪೋಲೀಸ್ ಔಟ್‌ಪೋಸ್ಟ್‌ವರೆಗೆ 400 Sq.mm UG ಕೇಬಲ್ ಅಳವಡಿಸಲಾಗಿದೆ. |
| 7 | ಬ್ಯಾಂಡ್ ಸ್ಟ್ಯಾಂಡ್‌ನಿಂದ ಹೆಚ್.ಎಂ.ಟಿ. ಗಡಿಯಾರದವರೆಗೂ UG Calbe ಮತ್ತು ಪ್ಯಾನಲ್‌ಬೋರ್ಡ್ ಅಳವಡಿಸಲಾಗಿದೆ. |
| 8 | ಲಾಲ್‌ಬಾಗ್ ಸಸ್ಯತೋಟದಲ್ಲಿ ಅಳವಡಿಸಲಾಗಿರುವ CCTV ಗಳ ನಿರ್ವಹಣೆ ಕಾರ್ಯ ಕೈಗೊಳ್ಳಲಾಗಿದೆ. |
| 9 | ಲಾಲ್‌ಬಾಗ್ ಸಸ್ಯತೋಟದ HMT ಹೂವಿನ ಗಡಿಯಾರ ನಿರ್ವಹಣೆ ಮಾಡಲಾಗುತ್ತಿದೆ. |
| 10 | ಲಾಲ್ ಬಾಗ್ ಸಸ್ಯತೋಟದಲ್ಲಿನ ವಿದ್ಯುತ್ ದಾರಿ ದೀಪಗಳು ಮತ್ತು ಕಛೇರಿಗಳಲ್ಲಿನ ವಿದ್ಯುತ್ ಲೈನ್ ಗಳನ್ನು KRDIL ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. |

| | | | |
|---|---|---|---|
| | | 11 | ಲಾಲ್‌ಬಾಗ್ ಸಸ್ಯತೋಟದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಅಳವಡಿಸಲಾಗಿರುವ 10 ಸಂಖ್ಯೆಯ Water Doctor H2o Purifier ಗಳ AMC ಕಾರ್ಯ ಕೈಗೊಳ್ಳಲಾಗಿದೆ. |
| | | 12 | ಲಾಲ್‌ಬಾಗ್ ಸಸ್ಯತೋಟದ ವಿವಿಧ ವಿಭಾಗಗಳಲ್ಲಿ ಅವಶ್ಯವಿರುವ ಪ್ಯಾನಲ್ ಬೋರ್ಡ್ ಗಳ ದುರಸ್ಥಿ / ಹೊಸ ಪ್ಯಾನಲ್ ಬೋರ್ಡ್ ಗಳ ಹಾಗೂ ಯುಜಿ ಕೇಬಲ್‌ಗಳ, ಅಳವಡಿಕೆ ಹಾಗೂ ವಿದ್ಯುತ್ ದೀಪದ ಕಂಬಗಳ ಅಳವಡಿಕೆ / ಎಲೆಕ್ಟ್ರಿಕ್ ಕಾರ್ಯಗಳನ್ನು ಕೈಗೊಳ್ಳಲಾಗಿದೆ. |
| | | 13 | ಲಾಲ್‌ಬಾಗ್ ಸಸ್ಯತೋಟಕ್ಕೆ ಅವಶ್ಯವಿರುವ ನಾಮಫಲಕ, ACP ಬೋರ್ಡ್, ಫ್ಲೆಕ್ಸ್ ಮತ್ತು ಇತರ ವಿನ್ಯಾಸ, ಮುದ್ರಣ ಹಾಗೂ ಇನ್ನಿತರ ಕಾರ್ಯಗಳನ್ನು ಕೈಗೊಳ್ಳಲಾಗಿದೆ. |
| | | 14 | ಲಾಲ್‌ಬಾಗ್ ಸಸ್ಯತೋಟದ ಕೆರೆಯಲ್ಲಿರುವ aerator ಗಳ ದುರಸ್ಥಿ ಹಾಗೂ ಇನ್ನಿತರೆ ಅವಶ್ಯ ಕಾರ್ಯಗಳನ್ನು ಕೈಗೊಳ್ಳಲಾಗಿದೆ. |
| | | 15 | ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದ ಅವಶ್ಯ ನಿರ್ವಹಣಾ ಕಾರ್ಯಗಳಾದ ಸ್ವಚ್ಛತೆ, ಭದ್ರತಾ ಕಾರ್ಯ ಕೈಗೊಳ್ಳುವುದು, ನೀರು ನಿರ್ವಹಣೆ, ವಿದ್ಯುತ್ ನಿರ್ವಹಣೆ, ಸಸ್ಯ ತೋಟಕ್ಕೆ ಅವಶ್ಯಕವಾದ ಪರಿಕರಗಳ ಖರೀದಿ ಇತ್ಯಾದಿ ಅವಶ್ಯ ನಿರ್ವಹಣಾ ಕಾರ್ಯಗಳಿಗಾಗಿ ವೆಚ್ಚವನ್ನು ಭರಿಸಲಾಗಿರುತ್ತದೆ |
| | | | ಕಬ್ಬನ್ ಉದ್ಯಾನವನದ ವಿವಿಧ ನಿರ್ವಹಣಾ ಕಾರ್ಯಗಳಾದ ಸ್ಪಿಂಕ್ಲರ್, ತೋಟಗಾರಿಕೆ ಪರಿಕರ / ಸಾಮಗ್ರಿ ಅಲಂಕಾರಿಕ ಸಸಿ/ಗಿಡಗಳು, ಕುಂಡಗಳು, ಸ್ವಚ್ಛತೆ, ಭದ್ರತಾ ಸೇವೆ ಪಡೆಯುವುದು ಮತ್ತು ಇತರೆ ತೋಟಗಾರಿಕೆ ಅವಶ್ಯಕ ಸಾಮಗ್ರಿಗಳ ಖರೀದಿಗೆ ಹಾಗೂ ಇತ್ಯಾದಿ ಉದ್ಯಾನವನದ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗಿರುತ್ತದೆ. |

ಸಂಖ್ಯೆ: HORTI 95 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು